

ಹಾಕಿದಾಗ ತಪ್ಪಿಸಿಕೊಂಡು ಬರುವವರು.' ಅಜ್ಜಿ ಆಗ ಗೋಡೆಗೊರಗಿ ನಿಂತ ಆ ಹುಡುಗಿಯ ನೇರಕ್ಕೆ ನೋಡುತ್ತಿದ್ದರು. ಅವಳಾದರೋ ಭೂಗರ್ಭದಿಂದ ಮೊದಲ ಬಾರಿಗೆ ಹಗಲ ಬೆಳಕಿಗೆ ಬಂದ ಅದ್ಭುತ ಜೀವಿಯಂತೆ ನಿಂತಿದ್ದಾಳೆ! ಅಮ್ಮ ಇನ್ನೂ ಚಾವಡಿಗೆ ಬರಲಿಲ್ಲ. ಅಮ್ಮನನ್ನು ಕರೆಯಲೇ ಎಂದು ಅನ್ನಿಸಿತು. ಆರು ವರ್ಷಗಳ ಬಳಿಕ ಅಪ್ಪ ಬಂದಿದ್ದಾರೆ. ಆಗ ಒಮ್ಮೆ ಹೊರಗೆ ಬರಬಾರದೆ? ಮನೆಯ ವಾತಾವರಣದಲ್ಲಿ ಅರ್ಥಗರ್ಭಿತವಾದ ಮೌನ ನೆಲೆನಿಂತಿದೆ. ನನಗದರ ಕಾರಣ ತಿಳಿಯಿತು. ಅಜ್ಜಿಯಲ್ಲೆಂಬಂತೆ ಅಪ್ಪ ಕೆಲಸದ ಸ್ಥಳದಲ್ಲಿ ಬಾಂಬು ಹಾಕಿದ ವಿವರಗಳನ್ನು ಇತರರಿಗೆಲ್ಲ ಕೇಳುವಂತೆ ವಿವರಿಸುತ್ತಿದ್ದರು. ಅಪ್ಪ ನೆಲೆಸಿದ್ದ ಬೀದಿಯ ಇನ್ನೊಂದು ತುದಿಯಲ್ಲಿ ಬಾಂಬು ಹಾಕಿದ್ದರಂತೆ. ಒಂದು ದೊಡ್ಡ ಜವಳಿಯ ಅಂಗಡಿ ಪೂರ್ಣವಾಗಿ ಉರಿದು ನಾಶವಾಯಿತು. ಕಟ್ಟಡಗಳು ಹಲವು ನೆಲಕಚ್ಚಿದವು. ಅನೇಕರು ಸತ್ತರು. ಸತ್ತವರಲ್ಲಿ ಅಪ್ಪನ ಒಬ್ಬರು ಸ್ನೇಹಿತರೂ ಇದ್ದರು. ಆತ ಸಿಂಹಳಿ. ಅವನ ಮಗಳೇ ಅಪ್ಪನ ಜೊತೆಗಿರುವ ಲೀಲಾ.

ಲೀಲಾಳಿಗೆ ತನ್ನವರೆಂಬವರು ಬೇರೆ ಯಾರೂ ಇಲ್ಲ. ಅಮ್ಮ ಅವಳ ಚಿಕ್ಕಂದಿನಲ್ಲಿಯೇ ತೀರಿಕೊಂಡಿದ್ದರು. ಅಪ್ಪ ಬಾಂಬು ಹಾಕಿದಾಗ ಅಲ್ಲಿದ್ದರು. ಮತ್ತೆ ಅಲ್ಲಿ ಬಾಂಬು ಹಾಕಬಹುದು. ಅವಳನ್ನು ಕಾಪಾಡಲು ಜೊತೆಗೆ ಕರೆತರುವುದಲ್ಲದೆ ಬೇರೆ ದಾರಿಯಿರಲಿಲ್ಲ. ಅಪ್ಪ ಅಮ್ಮ ಇಲ್ಲದ ಆ ಮಗುವನ್ನು ನೋಡಿದೆ. ನನಗೆ ತುಂಬಾ ಸಂಕಟವೆನಿಸಿತು. ಪಾಪ! ಅವಳು ನೋಡಲು ಚಂದವಾಗಿದ್ದಾಳೆ. ನನ್ನ ಕ್ಲಾಸಿನ ಹುಡುಗಿಯರಿಗಿಂತಲೂ ಚಂದವಿದ್ದಾಳೆ, ನಿಜವಾಗಿಯೂ. ಅಜ್ಜಿ ಅವಳನ್ನು ಒಳಕ್ಕೆ ಕೂಗಿದರು. ಅವಳದನ್ನು ಕೇಳಿಸಿಕೊಂಡ ಭಾವ ಪ್ರಕಟಿಸಲಿಲ್ಲ. ಹತ್ತಿರಕ್ಕೆ ಬಂದು ಕೈ ಹಿಡಿದಾಗ ಅವಳು ಒಮ್ಮೆಗೇ ಚೀರಿದಳು. ಮುಂದುವರಿದು ಒಂದು ಕೂಗು, 'ಡ್ಯಾಡಿ...' ಅಪ್ಪನ ಸಮೀಪಕ್ಕೆ ಬಂದು ಅಜ್ಜಿಯೆಡೆಗೆ ಬೆರಳು ತೋರುತ್ತ ಕುಸು ಕುಸು ಎಂದು ಏನೇನೋ ಹೇಳಿದಳು. ಅದು ನನಗೆ ಹಿತವಾಗಲಿಲ್ಲ. ಮಾತಲ್ಲ, ಅಪ್ಪನಿಗೆ ತಾಗಿಕೊಂಡು ನಿಂತಿರುವ ಆ ನಿಲುಮೆ. ಅಂದು ರಾತ್ರಿ ಅಪ್ಪ ಮತ್ತು ಅಮ್ಮ ಪರಸ್ಪರ ಗಂಟೆಗಳ